**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ಬಾಗಲಕೋಟೆ**
**ಸಂಚಾರಿ ನ್ಯಾಯಾಲಯ ಗುಳೇದಗುಡ್ಡ**

ಸಿ.ಸಿ ನಂ.718/2019

| | | |
|---|---|---|
| ಸಾಕ್ಷಿಯ ಹೆಸರು | ಃ ಹುಚ್ಚಪ್ಪ ಕಡಪಟ್ಟಿ | ಸಿಡಬ್ಲ್ಯು- 1 |
| ತಂದೆಯ ಹೆಸರು | ಃ ನಿಂಗಪ್ಪ | ಪಿಡಬ್ಲ್ಯು- 1 |
| ವಯಸ್ಸು | ಃ 70 ವರ್ಷ | |
| ಉದ್ಯೋಗ | ಃ ನಿವೃತ್ತಿ | |
| ವಾಸಸ್ಥಳ | ಃ ಕೋಟೆಕಲ್ಲ, ತಾಃ ಗುಳೇದಗುಡ್ಡ | |

**ದಿನಾಂಕಃ 02-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ರವರಿಂದಃ-**

ಚಾಸಾ-4 ರಿಂದ 11 ರವರ ಪರಿಚಯ ನನಗೆ ಇರುತ್ತದೆ. ಆರೋಪಿಯ ಪರಿಚಯ ನನಗೆ ಇರುತ್ತದೆ. ಆರೋಪಿಯು ಪಂಚಾಯತಿ ಬಿಲ್ ಕಲೇಕ್ಟರ್ ಅಂತಾ ಕರ್ತವ್ಯ ನಿರ್ವಹಿಸಿರುತ್ತಾನೆ. ದಿ.04-08-2019 ರಂದು ನಾನು ಮನೆಯಲ್ಲಿರುವಾಗ ನನಗೆ ಪೋನ ಕರೆ ಬಂದಿದ್ದು ಇರುತ್ತದೆ. ಸದರಿ ಪೋನ ಚಾಸಾ-10 ಹಾಗೂ ಚಾಸಾ-11 ರವರ ಪೋನನಿಂದ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಇರುತ್ತದೆ. ನೀನು ನನಗೆ ಎಲ್ಲಾ ಕೇಳಾಕತ್ತಿ ರಂಡಿ ಮಗಾ, ಬೋಸಡಿ ಮಗಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು ಇರುತ್ತದೆ. ನನಗೆ ಈ ವಿಚಾರ ಚಾಸಾ-10 ರವರ ಮುಖಾಂತರ ತಿಳಿದಿದ್ದು ಇರುತ್ತದೆ. ಚಾಸಾ-10 ರವರನ್ನು ಆತನ ಪಾಲಕರು ಬಿಡಿಸಿಕೊಂಡು ಹೋಗಿದ್ದು ಇರುತ್ತದೆ. ಪುನಃ ರಾತ್ರಿ 9-00 ಗಂಟೆ ಆರೋಪಿಯು ನನ್ನ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ಬೈದು ನಿನ್ನ ರುಂಡ ತೆಗೆಯುತ್ತೇನೆ ಎಂದು ಜೀವದ ಧಮಕಿ ಹಾಕಿದ್ದು ಇರುತ್ತದೆ. ನಾವು ಆತನ ಬೆದರಿಕೆಗೆ ಅಂಜಿ ಮನೆಯ ಒಳಗೆ ಹೋಗಿದ್ದು ಇರುತ್ತದೆ. ಚಾಸಾ-9 ರವರು ಬಂದು ಆರೋಪಿಯನ್ನು ಕರೆದುಕೊಂಡು ಹೋಗಿದ್ದು ಇರುತ್ತದೆ. ಅದೇ ದಿನ ರಾತ್ರಿ 10-00 ಗಂಟೆ ಸುಮಾರಿಗೆ ಹೋಗಿ ನಡೆದ ಘಟನೆ ಕುರಿತು ವಿವರಣೆ ನೀಡಿದ್ದು ನಂತರ ಒಂದು ಪಿರ್ಯಾದಿಯನ್ನು ನೀಡಿದ್ದು ಇರುತ್ತದೆ. ಸಾಕ್ಷಿ ತಾನು ನೀಡಿರುವ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಘಟನಾ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದ್ದು ಇರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ ಆತನು ಈ ದಿನ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ಘಟನೆ ಕುರಿತು ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದು ಇರುತ್ತದೆ.

**ಪಾಟೀ ಸವಾಲು : ಶ್ರೀ.ಎಬಿಯು ಆರೋಪಿ ಪರ ವಕೀಲರಿಂದಃ-**

ನಾನು ಅಗ್ರಿಕಲ್ಚರ್ ಇಲಾಖೆಯಲ್ಲಿ ಎಎಓ ಎಂದು ಕಾರ್ಯನಿರ್ಹಿಸಿದ್ದೇನೆ. ನಾನು ನಿವೃತ್ತಿಗೊಂಡು 10 ವರ್ಷಗಳು ಆಗಿರುತ್ತವೆ. ನನ್ನ ಖುದ್ದು ಊರು ಕೋಟೆಕಲ್ಲ ಇರುತ್ತದೆ. ನಾನು ಚಾಸಾ-4 ರಿಂದ 11 ರವರು ಸೇರಿಕೊಂಡು ಪಂಚಾಯತಿಗೆ ಹೋಗಿರುವುದಿಲ್ಲ ಎಂದರೆ ಸರಿ. ಆರೋಪಿಯ ಪತ್ನಿಯ ಹಾಗೂ ತಾಯಿಯ ಹೆಸರಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಒಂದು ಮನೆಗಳು ಮಂಜೂರಾಗಿದ್ದು ಅವುಗಳನ್ನು ಕುರಿತು ಗ್ರಾಮ ಸಭೆ ಚರ್ಚೆ ಮಾಡಿರುತ್ತೇವೆ ಎಂದರೆ ಸರಿ. ಸದರಿ ಗ್ರಾಮ ಸಭೆಯಲ್ಲಿ 2018 ರಲ್ಲಿ ಚರ್ಚೆ ಆಗಿದ್ದು ಇರುತ್ತದೆ. ಈ ವಿಚಾರವನ್ನು ನನ್ನ ನಿಪಿ-1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಿ.04-08-2018 ರಂದು ನಾನು ಮನೆಯಲ್ಲಿರುವಾಗ ನನಗೆ ಫೋನ ಬಂದಿದ್ದು ಇರುತ್ತದೆ. ಸದರಿ ಫೋನ ಆರೋಪಿ ಮಾಡಿದ್ದು ಇರುತ್ತದೆ. ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ನನಗೆ ಚಾಸಾ-10 ಹಾಗೂ 11 ರವರ ನಂಬರ ನೆನಪಿರುವುದಿಲ್ಲ. ಈ ನಂಬರಗಳನ್ನು ನಾನು ಪೊಲೀಸರಿಗೆ ತೋರಿಸಿದ್ದು ಇರುತ್ತದೆ. ಫೋನ ಹಚ್ಚಿದ ನಂತರ ಚಾಸಾ-10 ನನ್ನ ಮನೆಗೆ ಬಂದಿದ್ದು ಇರುತ್ತದೆ. ಚಾಸಾ-10 ನನ್ನ ಸಮಾಜದ ಕಟ್ಟೆಗೆ ಬಂದಾಗ 5-00 ಗಂಟೆ ಆಗಿತ್ತು. ನನ್ನ ಜೊತೆ ಚಾಸಾ-10 ತಂದೆ ಹಾಗೂ ಸಹೋದರ ಕುಳಿತಾಗ ಚಾಸಾ-10 ಬಂದಿದ್ದು ಇರುತ್ತದೆ ಆ ಸಮಯದಲ್ಲಿ ಸಾರ್ವಜನಿಕರು ಎಂದು ನಾಲ್ಕು ಜನ ಸೇರಿರುತ್ತಾರೆ. ಅವರ ಹೆಸರು ಚಾಸಾ-10 ರವರ ತಂದೆ ಮಾಗೊಂಡಪ್ಪ, ಯಲಗೂರೇಶ ಅರಮನಿ ಇನ್ನಿಬರ ಹೆಸರು ನನಗೆ ಹೇಳಲು ಬರುವುದಿಲ್ಲ.

5 ನಿಮೀಷಗಳ ಕಾಲ ಚಾಸಾ-10 ನನ್ನ ಜೊತೆ ಬಾಯಿ ಮಾಡಿದ್ದು ಇರುತ್ತದೆ. ಚಾಸಾ-10 ರವರ ಬಗ್ಗೆ ನಿಪಿ-1 ರಲ್ಲಿ ಬರೆದಿರುವುದಿಲ್ಲ. ಪುನಃ ರಾತ್ರಿ ಆರೋಪಿಯು 9-00 ಗಂಟೆಗೆ ಬಂದು ನಮ್ಮ ಮನೆಯ ಅಂಗಳದಲ್ಲಿ ಬಂದು ಅವಾಚ್ಯ ಶಬ್ದಗಳಿಂದ ಬೈದು ನನಗೆ ಜೀವದ ಧಮಕಿ ಹಾಕಿದ್ದು ಇರುತ್ತದೆ. ನನ್ನ ಮನೆಯ ಹತ್ತಿರ ಸಾಕಷ್ಟು

ಮನೆಗಳು ಇರುತ್ತವೆ ಎಂದರೆ ಸರಿ. ಘಟನೆ ನಡೆದಾಗ ಸುತ್ತಮುತ್ತ ಜನರು ಸೇರಿರುತ್ತಾರೆ ಎಂದರೆ ಯಾರು ಸೇರಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮನೆಯ ಮುಂದೆ ಆರೋಪಿಯು 10 ನಿಮೀಷ ಕಾಲ ಬಾಯಿ ಮಾಡಿದ್ದು ಇರುತ್ತದೆ. ನನ್ನ ಪತ್ನಿಯು ಆರೋಪಿಯು ಒದರಾಡಿರುವ ಮಾತಗಳನ್ನು ಕೇಳಿದ್ದು ಇರುತ್ತದೆ. ನಾನು ಹಾಗೂ ನನ್ನ ಹೆಂಡತಿ ಆರೋಪಿಯನ್ನು ಆ ದಿನ ನೋಡಿದ್ದು ಇರುತ್ತದೆ.

ನನ್ನ ಮನೆಯಿಂದ ಚಾಸಾ-9 ರವರ ಮನೆಯ 300 ಮೀಟರ ದೂರ ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಬಾಯಿ ಮಾತ ಆದರೆ ಚಾಸಾ-9 ರವರ ಮನೆಗೆ ಕೇಳುವುದಿಲ್ಲ ಎಂದರೆ ಸರಿ. ಘಟನೆ ಆದ ದಿನ ರಾತ್ರಿ 9-00 ಗಂಟೆಯ ಸುಮಾರಿಗೆ ಪಿರ್ಯಾದಿ ನೀಡಿದ್ದು ಇರುತ್ತದೆ. ಘಟನಾ ಸ್ಥಳಕ್ಕೆ ಪೊಲೀಸರು ಪಂಚನಾಮೆಗಾಗಿ 5 ನೇ ತಾರೀಖಿಗೆ ಬಂದಿದ್ದು ಇರುತ್ತದೆ. ಆಗ ಸಮಯ ಬೆ.10 ರಿಂದ 11 ಗಂಟೆ ಆಗಿತ್ತು. ನಿಪಿ-1 ರಲ್ಲಿ ನಮೂದು ಮಾಡಿರುವ ಪೋನ ನಂ.9880520964 ನನ್ನದೇ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಚಾಸಾ-10 ಹಾಗೂ 11 ರವರ ಪೋನ ನಂಬರಿನ ಕುರಿತು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

ಆರೋಪಿಯು ಚಾಸಾ-10 ಹಾಗೂ 11 ರವರ ಪೋನಿನ ಮುಖಾಂತರ ನನಗೆ ಅವಾಚ್ಯ ಶಬ್ದಗಳಿಂದ ಬೈದು ಜೀವದ ಬೆದರಿಕೆಯನ್ನು ಹಾಕಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-10 ನನ್ನ ಮನೆಗೆ ಬಂದು ಬಾಯಿ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ರಾತ್ರಿ ಆರೋಪಿಯು ನನ್ನ ಮನೆಗೆ ಬಂದು ಬಾಯಿ ಮಾತು ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಬಂದುಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ನಡೆದಿದ್ದರು ಸಹ ಆರೋಪಿಯ ವಿರುದ್ದ ಸುಳ್ಳು ಪಿರ್ಯಾದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆ ಃ ಇರುವುದಿಲ್ಲಾ.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ.ಸರಿ ಅದೆ. ನನ್ನ ಸಮಕ್ಷಮ

ಸಹಿ/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಬಾಗಲಕೋಟ
ಸಂಚಾರಿ ನ್ಯಾಯಾಲಯ ಗುಳೇದಗುಡ್ಡ